ದಿನಾಂಕಃ 29-11-2025 ರಂದು ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ನಾನು 2002 ರಲ್ಲಿ ನೋಟರಿಯಾಗಿ ಅಪಾಯಿಂಟ್ ಆಗಿದ್ದೆನು. ನಾನು 12 ವರ್ಷಗಳ ಕಾಲ ನೋಟರಿಯಾಗಿ ಕೆಲಸ ಮಾಡಿರುತ್ತೇನೆ. ಒಂದು ದಿನದಲ್ಲಿ ಎಷ್ಟು ನೋಟರಿಗೆ ಬರುತ್ತದೆ ಎಂದರೆ ಸಾಕ್ಷಿದಾರರು ಅಂದಾಜು 1, 2, 10, 15 ನೋಟರಿ ಬರುತ್ತಿತ್ತು ಎಂದು ನುಡಿಯುತ್ತಾರೆ. ನೋಟರಿ ಮಾಡಲು ಯಾರು ಬಂದಿರುತ್ತಾರೆ ಎಂದು ನನಗೆ ಹೇಳಲು ನೆನಪು ಇರುವುದಿಲ್ಲ. ಪಿರ್ಯಾದುದಾರರು ನನ್ನ ಬಳಿ ಅವರ ತಂದೆಯವರು ಮರಣ ಹೊಂದಿದ ಬಗ್ಗೆ ಪ್ರಮಾಣ ಪತ್ರ ಮಾಡಲು ಬಂದಿದ್ದ ಬಗ್ಗೆ ನನಗೆ ನೆನಪಿಲ್ಲ ಎಂದರೆ ಸರಿ. ಅದೇ ರೀತಿ 2010 ರಲ್ಲಿ ಯಾರು ನೋಟರಿಗೆ ಬಂದು ನೋಟರಿಯನ್ನು ಮಾಡಿಕೊಂಡು ಹೋಗಿರುತ್ತಾರೆ ಎಂದು ಹೇಳಲು ನನಗೆ ನೆನಪಿಲ್ಲ ಎಂದರೆ ಸರಿ. ನನಗೆ ದಾಖಲೆಯನ್ನು ನೋಡಿದರೆ ನಾನು ನೋಟರಿ ಮಾಡಿದ ಬಗ್ಗೆ ಹೇಳಬಹುದು ಎಂದರೆ ಸರಿ. ಪಿರ್ಯಾದುದಾರರನ್ನು ನೋಡಿ ಸದರಿಯವರು ನಿರ್ದಿಷ್ಟ ದಾಖಲೆಯನ್ನು ನನ್ನ ಮುಂದೆ ನೋಟರಿ ಮಾಡಿಕೊಂಡು ಹೋಗಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ. ನಾನು ದಾಖಲೆಯನ್ನು ನೋಟರಿ ಮಾಡಿದ ಬಗ್ಗೆ ಸಂಬಂಧಪಟ್ಟ ರಿಜಿಸ್ಟರ್ ನಲ್ಲಿ ನಮೂದು ಮಾಡುತ್ತೇನೆ. ಪ್ರತಿ ವರ್ಷ ಸದರಿ ರಿಜಿಸ್ಟರ್ ಅನ್ನು ಜಿಲ್ಲಾ ನ್ಯಾಯಾಧೀಶರ ಮುಂದೆ ಹಾಜರುಪಡಿಸಬೇಕಾಗಿರುತ್ತದೆ ಎಂದರೆ ಸರಿ. ಪ್ರತಿ 5 ವರ್ಷಕ್ಕೊಮ್ಮೆ ನಾನು ನೋಟರಿಯನ್ನು ನವೀಕರಣಗೊಳಿಸಬೇಕಾಗುತ್ತದೆ ಎಂದರೆ ಸರಿ. ನಾವು ಸದರಿ ನವೀಕರಣಗೊಳಿಸಲು ಪ್ರತಿ 5 ವರ್ಷಕ್ಕೊಮ್ಮೆ ಜಿಲ್ಲಾ

ನ್ಯಾಯಾಧೀಶರ ಮೂಲಕ ಲಾ ಸೆಕ್ರೇಟರಿಗೆ ಕಳುಹಿಸಬೇಕಾಗುತ್ತದೆ ಎಂದರೆ ಸರಿ. ಜಿಲ್ಲಾ ನ್ಯಾಯಾಧೀಶರಿಗೆ ಹಾಜರುಪಡಿಸಿದ ರಿಜಿಸ್ಟರ್ ಅನ್ನು ಅವರು ಪರಿಶೀಲಿಸಿದ ನಂತರ 2 ರಿಂದ 3 ತಿಂಗಳು ಬಿಟ್ಟು ನಮಗೆ ವಾಪಾಸ್ ಮಾಡುತ್ತಾರೆ ಎಂದರೆ ಸರಿ. ನನಗೆ ವಾಪಾಸ್ ಮಾಡಿದ ರಿಜಿಸ್ಟರ್ ಅನ್ನು ನಾನು ಮನೆಯಲ್ಲಿಯೇ ಇಟ್ಟುಕೊಳ್ಳುತ್ತೇನೆ. ಸದರಿ ದಾಖಲೆಯನ್ನು ನಾನು ಜಾಗರೂಕತೆಯಿಂದ ತೆಗೆದಿಟ್ಟುಕೊಳ್ಳಬೇಕಾಗಿರುವುದು ನನ್ನ ಕರ್ತವ್ಯ ಎಂದರೆ ಸರಿ. ಒಂದು ದಾಖಲೆಯು ನಿಜ ದಾಖಲೆ ಹೌದೋ ಇಲ್ಲವೋ ಎನ್ನುವ ಬಗ್ಗೆ ಪರಿಶೀಲಿಸಲು ಸದರಿ ರಿಜಿಸ್ಟರ್ ನ ಅವಶ್ಯಕತೆ ಇರುತ್ತದೆ ಎಂದರೆ ಸರಿ. ಯಾವುದೇ ದಾಖಲೆಯ ಬಗ್ಗೆ ತಕರಾರು ಇದ್ದಲ್ಲಿ ಕಾನೂನಿನ ನಡವಳಿಗಳಲ್ಲಿ ಸದರಿ ರಿಜಿಸ್ಟರ್ ನ ಅವಶ್ಯಕತೆ ಬೀಳುತ್ತದೆ ಎಂದರೆ ಸರಿ. ಸದರಿ ರಿಜಿಸ್ಟರ್ ನ ಅವಶ್ಯಕತೆ ಭವಿಷ್ಯದಲ್ಲಿ ಇರಬಹುದು ಎನ್ನುವ ಬಗ್ಗೆ ನನ್ನ ಗಮನಕ್ಕೆ ಇದ್ದರೂ ಕೂಡಾ ಸದರಿ ರಿಜಿಸ್ಟರ್ ಅನ್ನು ನಾನು ಯಾವ ಕಾರಣಕ್ಕಾಗಿ ಸುಟ್ಟು ಹಾಕಿರುತ್ತೇನೆ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ನನಗೆ ಅದರ ಅವಶ್ಯಕತೆ ಇರಲಿಲ್ಲ ಹಾಗೂ ಕಾನೂನಿನಲ್ಲಿ ಅದನ್ನು ತೆಗೆದಿಡಬೇಕು ಎನ್ನುವ ನಿಯಮ ಇಲ್ಲದೇ ಇದ್ದ ಕಾರಣ ನಾನು ಅದನ್ನು ಸುಟ್ಟು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಅಂದಾಜು 25 ರಿಜಿಸ್ಟರ್ ಗಳನ್ನು ಸುಟ್ಟು ಹಾಕಿರಬಹುದು. ನನ್ನಲ್ಲಿ ಒಟ್ಟು ಎಷ್ಟು ರಿಜಿಸ್ಟರ್ ಗಳು ಇದ್ದವು ಎಂದು ನಾನು ಲೆಕ್ಕ ಮಾಡಿರುವುದಿಲ್ಲ. ನಾನು ಸದರಿ ರಿಜಿಸ್ಟರ್ ಅನ್ನು ಯಾವ ವರ್ಷದಲ್ಲಿ ಸುಟ್ಟು ಹಾಕಿರುತ್ತೇನೆ ಎಂದು ಹೇಳಲು ನನಗೆ ನೆನಪಿಲ್ಲ. ಸದರಿ ರಿಜಿಸ್ಟರ್ ಅನ್ನು ಶಂಕರಪುರದಲ್ಲಿ ಇರುವ ನನ್ನ ಮನೆಯಲ್ಲಿ ಸುಟ್ಟು ಹಾಕಿರುತ್ತೇನೆ. ಸದರಿ ಸುಟ್ಟು ಹಾಕಿರುವ ರಿಜಿಸ್ಟರ್ ನಲ್ಲಿ

ಪಿರ್ಯಾದುದಾರರು ಮಾಡಿರುತ್ತಾರೆ ಎನ್ನಲಾದ ಪ್ರಮಾಣ ಪತ್ರದ ನಮೂದು ಇತ್ತೋ ಇಲ್ಲವೋ ಎನ್ನುವ ಬಗ್ಗೆ ನನಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿದಾರರು ನಾನು ಎಲ್ಲಾ ರಿಜಿಸ್ಟರ್ ಗಳನ್ನು ಸುಟ್ಟು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ನೋಟರಿ ರಿಜಿಸ್ಟರ್ ಈಗಲೂ ನನ್ನ ಬಳಿ ಇದ್ದು ಪಿರ್ಯಾದುದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಟ್ಟು ಹಾಕಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರಿಜಿಸ್ಟರ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದರೆ ನಿಜಾಂಶ ಹೊರಗೆ ಬರುತ್ತದೆ ಎನ್ನುವ ಉದ್ದೇಶದಿಂದ ನಾನು ಸದರಿ ರಿಜಿಸ್ಟರ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರ ಹೇಳಿಕೆ ಮೇರೆಗೆ ನಾನು ಈ ದಿನ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಓಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

C.C.No.1049/2023
PW-4